ಪ್ರಶ್ನೆ 127
13/12/2024 (5)

**ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ ಹಾಗೂ ಮಾನ್ಯ ಶಾಸಕರುಗಳಾದ ಶ್ರೀ ನಿರಾಣಿ ಹಣಮಂತ ರುದ್ರಪ್ಪ, ಶ್ರೀ ಎಸ್.ಎಲ್. ಭೋಜೇಗೌಡ, ಶ್ರೀ ಎನ್. ರವಿಕುಮಾರ್ ಶ್ರೀ ಶಶೀಲ್ ಜಿ. ನಮೋಶಿ, ಶ್ರೀ ಎಸ್.ವ್ಹಿ. ಸಂಕನೂರ, ಡಾ|| ಶ್ರೀ ಧನಂಜಯ್ ಸರ್ಜಿ ಹಾಗೂ ಇತರರುಗಳು ಮಂಡಿಸಿರುವ ನಿಯಮ 72 ರಡಿಯಲ್ಲಿ ಗಮನ ಸೆಳೆಯುವ ಸೂಚನೆಗೆ ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಮತ್ತು ಕನ್ನಡ ಸಂಸ್ಕೃತಿ ಸಚಿವರ ಉತ್ತರ**

**ವಿಷಯ:**

ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜವು ಕಳೆದ 32 ವರ್ಷಗಳಿಂದ ಸತತವಾಗಿ ಹೋರಾಟ ನಡೆಸುತ್ತಾ ಬಂದಿದ್ದರೂ ಸಹ ಸರ್ಕಾರವು ಆರಂಭದಿಂದ ಬೇಡಿಕೆ ಇಟ್ಟರೂ ಸಹ ಸ್ಪಂದಿಸದೇ ಸರ್ಕಾರವು ಹೋರಾಟದ ಅನಿವಾರ್ಯತೆಯನ್ನು ಸೃಷ್ಟಿ ಮಾಡುವ ಮೂಲಕ ಲಾಠಿ ಚಾರ್ಜ್ ನಡೆಸಿ ಹೋರಾಟವನ್ನು ಹತ್ತಿಕ್ಕುವ ಪ್ರಯತ್ನ ಮಾಡಿದೆ. ಸಾಮಾಜಿಕ ನ್ಯಾಯದಡಿ ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜಕ್ಕೆ ಪ್ರವರ್ಗ-2 ಮೀಸಲಾತಿ ನ್ಯಾಯ ನೀಡುವ ವಿಚಾರವನ್ನು ನಿಯಮ 72ರ ಮೇರೆಗೆ ಗಮನ ಸೆಳೆಯಲು ಬಯಸುತ್ತೇನೆ.

******

**ಉತ್ತರ:**

ಪ್ರಸ್ತುತ ಹಿಂದುಳಿದ ವರ್ಗಗಳ ಮೀಸಲಾತಿ ಪಟ್ಟಿಯಲ್ಲಿ ಪಂಚಮಸಾಲಿ ಲಿಂಗಾಯತ ಸಮುದಾಯವು ಪ್ರವರ್ಗ-3 ಬಿ ರಡಿಯಲ್ಲಿ ಶಿಕ್ಷಣ ಮತ್ತು ಉದ್ಯೋಗಕ್ಕಾಗಿ ಮೀಸಲಾತಿ ಸೌಲಭ್ಯವನ್ನು ಪಡೆಯುತ್ತಿದೆ. ಪಂಚಮಸಾಲಿ ಲಿಂಗಾಯತ ಸಮುದಾಯವು ಪ್ರಸ್ತುತ ಪ್ರವರ್ಗ-3ಬಿ ಯಿಂದ ಪ್ರವರ್ಗ-2ಎ ಗೆ ಸೇರ್ಪಡೆ ಮಾಡುವಂತೆ ಸರ್ಕಾರ ಮತ್ತು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಮನವಿಗಳನ್ನು ಸ್ವೀಕರಿಸಿರುತ್ತದೆ.

ಶ್ರೀ ಎಸ್. ಸಿದ್ದಗಂಗಯ್ಯ ನೇತೃತ್ವದ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ತನ್ನ ಮಧ್ಯಂತರ ವರದಿ-2005 ರಲ್ಲಿ ವೀರಶೈವ ಲಿಂಗಾಯತ 19 ಉಪಜಾತಿಗಳನ್ನು ಪ್ರವರ್ಗ-1 (ಬಿ)ಗೆ ಸೇರಿಸಲು ಹಾಗೂ ಪ್ರವರ್ಗ-1 (ಬಿ) ಗೆ ಹಾಲಿ ಜಾರಿಯಲ್ಲಿರುವ ಶೇಕಡ 5 ರಷ್ಟು ಮೀಸಲಾತಿಯನ್ನು ಮುಂದುವರೆಸಲು ಸಲಹೆ ನೀಡಿರುತ್ತದೆ.

ಮುಂದುವರೆದು, ದಿನಾಂಕ: 27.01.2009ರ ಆದೇಶದಲ್ಲಿ ವೀರಶೈವ ಲಿಂಗಾಯತ 19 ಉಪಜಾತಿಗಳನ್ನು ಸೇರ್ಪಡೆ ಮಾಡಿ ಆದೇಶಿಸಲಾಗಿರುತ್ತದೆ. ತದನಂತರ, ದಿನಾಂಕ: 28.02.2009 ತಿದ್ದುಪಡಿ ಆದೇಶದಲ್ಲಿ "ಲಿಂಗಾಯತ/ವೀರಶೈವ-ವೀರಶೈವ ಪಂಚಮಸಾಲಿ" ಎಂಬುದನ್ನು ಹೊರುತುಪಡಿಸಿ ಇನ್ನುಳಿದ 18 ವೀರಶೈವ ಲಿಂಗಾಯತ ಉಪಜಾತಿಗಳ ಸೇರ್ಪಡೆ ಆದೇಶವನ್ನು ಹಿಂಪಡೆಯಲಾಗಿರುತ್ತದೆ.

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಸನ್ಮಾನ್ಯ ಮುಖ್ಯಮಂತ್ರಿಗಳ ಟಿಪ್ಪಣಿ ದಿನಾಂಕ 05.02.2021ರ ಅನ್ವಯ ಪಂಚಾಮಸಾಲಿ ಜನಾಂಗದ ಮೀಸಲಾತಿ ಕುರಿತಂತೆ ಸಮಗ್ರ ಅಧ್ಯಯನ ಮಾಡಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗಕ್ಕೆ ನಿರ್ದೇಶನ ನೀಡಲಾಗಿರುತ್ತದೆ.

ದಿನಾಂಕ: 21.12.2022 ರಂದು ಮಧ್ಯಂತರ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತದೆ. ವರದಿಯಲ್ಲಿನ ಶಿಫಾರಸ್ಸಿನ್ವಯ ಪ್ರವರ್ಗ-2ಸಿ ಮತ್ತು ಪ್ರವರ್ಗ-2ಡಿ ಎಂದು ಹೊಸದಾಗಿ ಪ್ರವರ್ಗವನ್ನು ಸೃಜಿಸಲಾಗಿದ್ದು, ಈ ಹಿಂದಿನ 30.03.2002ರ ಆದೇಶದಲ್ಲಿ ಪ್ರವರ್ಗ-2 ಬಿ (ಮುಸ್ಲಿಂ)ಗೆ ಇದ್ದ ಶೇಕಡ 4ರ ಮೀಸಲಾತಿಯನ್ನು ಶೇಕಡ ತಲಾ 2 ರಂತೆ 2ಸಿ ಮತ್ತು 2ಡಿ ಪ್ರವರ್ಗಗಳಿಗೆ ವರ್ಗಾಯಿಸಿ ಆದೇಶಿಸಲಾಗಿರುತ್ತದೆ.

...2

ಮುಂದುವರೆದು, ಪ್ರವರ್ಗ-2ಬಿ ರಲ್ಲಿದ್ದ ಮುಸ್ಲಿಂ ಸಮುದಾಯವನ್ನು ಹಿಂದುಳಿದ ವರ್ಗಗಳ ಪಟ್ಟಿಯಿಂದ ರದ್ದುಪಡಿಸಿ ಆರ್ಥಿಕವಾಗಿ ದುರ್ಬಲ ವರ್ಗ(EWS)ದ ಗುಂಪಿಗೆ ವರ್ಗಾಯಿಸಿ ಗರಿಷ್ಠ ಮೀಸಲಾತಿ ಶೇಕಡ 10 ರಷ್ಟನ್ನು ನೀಡಿ ಆದೇಶಿಸಲಾಗಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಹಿಂವಕ 135 ಬಿಸಿಎ 2023 ದಿನಾಂಕ: 27.03.2023 (ಹೊಸದಾಗಿ ಸೃಜಿಸಲಾಗಿರುವ ಪ್ರವರ್ಗ-2ಸಿ ಮತ್ತು ಪ್ರವರ್ಗ-2ಡಿ ಆದೇಶ) ಹಾಗೂ ಸರ್ಕಾರದ ಆದೇಶ ಸಂಖ್ಯೆ: ಹಿಂವಕ 133 ಬಿಸಿಎ 2023 ದಿನಾಂಕ: 27.03.2023 (ಮುಸ್ಲಿಂ ಸಮುದಾಯಕ್ಕೆ ಆರ್ಥಿಕವಾಗಿ ದುರ್ಬಲ ವರ್ಗ(EWS)ದ ಗುಂಪಿಗೆ ಸೇರ್ಪಡೆ ಮಾಡಿದ ಆದೇಶ) ಆದೇಶಗಳನ್ನು ಪ್ರಶ್ನಿಸಿ WP No.435/2023 and WP 468/2023 ಪ್ರಕರಣಗಳನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲಿಸಲಾಗಿರುತ್ತದೆ. ಸದರಿ ಪ್ರಕರಣದಲ್ಲಿ ರಾಜ್ಯ ಸರ್ಕಾರವನ್ನು ಪ್ರತಿನಿಧಿಸುತ್ತಿರುವ Solicitor General ರವರು ದಿನಾಂಕ: 04.08.2023 ರಂದು ನಡೆದ ವಿಚಾರಣೆಯಲ್ಲಿ ಪರಿಷ್ಕೃತ ಪುನರ್ ವರ್ಗೀಕರಣದ ಆದೇಶ ಸಂಖ್ಯೆ: ಹಿಂವಕ 135 ಬಿಸಿಎ 2023, ದಿನಾಂಕ: 27.03.2023ರ ಆದೇಶವನ್ನು ಶಿಕ್ಷಣ ಮತ್ತು ಉದ್ಯೋಗಕ್ಕಾಗಿ ಅಳವಡಿಸಿಕೊಳ್ಳಲಾಗುವುದಿಲ್ಲವೆಂದು ಹಾಗೂ ಪ್ರಸ್ತುತ ಚಾಲ್ತಿಯಲ್ಲಿರುವ ಆದೇಶ ಸಂಖ್ಯೆ: ಸಕಇ 225 ಬಿಸಿಎ 2000 ದಿನಾಂಕ: 30.03.2002ನ್ನು ಮುಂದುವರೆಸಲಾಗುವುದು ಎಂಬ ಹೇಳಿಕೆಯನ್ನು ದಾಖಲಿಸಿರುತ್ತಾರೆ (Statement on Record). ಪ್ರಕರಣವು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ.

ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾದ ಪ್ರಕರಣ ಸಂಖ್ಯೆ: WP No.26045/2022 (GM-RES) PIL Sri. Raghavendra D.G. V/s State of Karnataka and Others ಪ್ರಕರಣದಲ್ಲಿ ಅರ್ಜಿದಾರರು ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಪ್ರತಿವಾದಿಗಳಿಗೆ ಜಾತಿಗಳು, ಉಪಜಾತಿಗಳು, ಸಮುದಾಯಗಳು ಅಥವಾ ಬುಡಕಟ್ಟಿನ ಯಾವುದೇ ಸ್ಥಾನಮಾನ ಅಥವಾ ಮೀಸಲಾತಿ ಪ್ರಮಾಣವನ್ನು ಬದಲಾಯಿಸದಂತೆ ಹಾಗೂ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದಿಂದ ಡಿಸೆಂಬರ್ 2022 ರಲ್ಲಿ ಸರ್ಕಾರಕ್ಕೆ ಸಲ್ಲಿಸಿದ ಮಧ್ಯಂತರ ವರದಿಯ ಸಲಹೆಗಳ ಮುಂದಿನ ಪ್ರಕ್ರಿಯೆಗಳನ್ನು ತಡೆಹಿಡಿಯುವ ಆದೇಶವನ್ನು ಜಾರಿಗೊಳಿಸಲು ಕೋರಿರುತ್ತಾರೆ.

ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ದಿನಾಂಕ: 23.03.2023 ರಂದು ಸರ್ಕಾರದ ಆದೇಶ ಸಂಖ್ಯೆ: ಸಕ ಇ 225 ಬಿಸಿಎ 2000 ದಿನಾಂಕ: 30.03.2002ರ ಆದೇಶದ ಪ್ರವರ್ಗ-2(ಎ) ಗೆ ಮೀಸಲಾತಿ ಪ್ರಮಾಣ ಬದಲಾವಣೆ ಮತ್ತು ಯಾವುದೇ ಸಮುದಾಯಗಳನ್ನು ಪ್ರವರ್ಗ-2(ಎ) ಗೆ ಸೇರಿಸುವುದು ಅಥವಾ ಕೈಬಿಡುವುದನ್ನು ಮಾನ್ಯ ಉಚ್ಚ ನ್ಯಾಯಾಲಯದ ಮುಂದಿನ ಅನುಮತಿ ಇಲ್ಲದೆ ಜಾರಿಗೊಳಿಸುವುದಿಲ್ಲವೆಂದು Compliance/undertaking affidavit ನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತದೆ. ಅದರಂತೆ, ಪ್ರಕರಣವು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ.

**ಸಂಖ್ಯೆ:ಹಿಂವಕ 373 ಬಿಸಿಎ 2024**

**( ಶಿವರಾಜ ಎಸ್.ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ,
ಕನ್ನಡ ಮತ್ತು ಸಂಸ್ಕೃತಿ ಸಚಿವರು